ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನ್ ಮುನ್ಕರಾತಿಲ್ ಅಖ್ಲಾಖಿ ವಲ್-ಅಅ್ಮಾಲಿ ವಲ್-ಅಹ್ವಾಅ್" (ಅರ್ಥ: ಓ ಅಲ್ಲಾಹನೇ, ಖಂಡಿತವಾಗಿಯೂ ನಾನು ನಿಂದನೀಯ ಸ್ವಭಾವದಿಂದ, (ಕೆಟ್ಟ) ಕಾರ್ಯಗಳಿಂದ ಮತ್ತು (ಕೆಟ್ಟ) ಇಚ್ಛೆಗಳಿಂದ ನಿನ್ನಲ್ಲಿ ಅಭಯ ಕೋರುತ್ತೇನೆ.)

ಖುತ್ಬಾ ಇಬ್ನ್ ಮಾಲಿಕ್ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ: ಪ್ರವಾದಿಯವರು
(ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೀಗೆ ಹೇಳುತ್ತಿದ್ದರು: "ಅಲ್ಲಾಹುಮ್ಮ
ಇನ್ನೀ ಅಊದು ಬಿಕ ಮಿನ್ ಮುನ್ಕರಾತಿಲ್ ಅಖ್ಲಾಖಿ ವಲ್-ಅಅ್ಮಾಲಿ ವಲ್-ಅಹ್ವಾಅ್" (ಅರ್ಥ: ಓ ಅಲ್ಲಾಹನೇ, ಖಂಡಿತವಾಗಿಯೂ ನಾನು ನಿಂದನೀಯ ಸ್ವಭಾವದಿಂದ, (ಕೆಟ್ಟ) ಕಾರ್ಯಗಳಿಂದ ಮತ್ತು
(ಕೆಟ್ಟ) ಇಚ್ಛೆಗಳಿಂದ ನಿನ್ನಲ್ಲಿ ಅಭಯ ಕೋರುತ್ತೇನೆ.) [صحيح] [رواه الترمذي]

ಪ್ರವಾದಿಯವರ (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಪ್ರಾರ್ಥನೆಗಳಲ್ಲಿ ಇದೂ ಒಂದಾಗಿತ್ತು: "ಅಲ್ಲಾಹುಮ್ಮ ಇನ್ನೀ ಅಊದು" ಓ ಅಲ್ಲಾಹನೇ, ನಾನು ಅಭಯ ಕೋರುತ್ತೇನೆ, ಮೊರೆ ಹೋಗುತ್ತೇನೆ ಮತ್ತು ರಕ್ಷಣೆ ಬೇಡುತ್ತೇನೆ "ಬಿಕ" ನಿನ್ನಲ್ಲಿ, ನಿನ್ನನ್ನು ಹೊರತುಪಡಿಸಿ ಬೇರೆ ಯಾರಲ್ಲೂ ಅಲ್ಲ, "ಮಿನ್ ಮುನ್ಕರಾತಿ" ಅಲ್ಲಾಹು ಮತ್ತು ಅವನ ಸಂದೇಶವಾಹಕರು ನಿಷೇಧಿಸಿದ ವಿಷಯಗಳಿಂದ, "ಅಲ್-ಅಖ್ಲಾಖ್" ದ್ವೇಷ/ಹಗೆತನ, ಅಸೂಯೆ, ಅಹಂಕಾರ ಮುಂತಾದ ಸ್ವಭಾವಗಳಿಂದ, "ವ" ಮತ್ತು ನಿಂದನೀಯ "ಅಲ್-ಅಅ್ಮಾಲ್" ಅಂದರೆ, ಬೈಯ್ಯುವುದು, ನಿಂದಿಸುವುದು ಮುಂತಾದ ಕಾರ್ಯಗಳಿಂದ, "ವ" ಮತ್ತು ಎಲ್ಲಾ "ಅಲ್-ಅಹ್ವಾಅ್" ಇಚ್ಛೆಗಳಿಂದ, ಅಂದರೆ, ಮನಸ್ಸು ಬಯಸುವ ಮತ್ತು ಶರೀಅತ್ಗೆ ವಿರುದ್ಧವಾಗಿರುವ ಇಚ್ಛೆಗಳಿಂದ (ಅಭಯ ಕೋರುತ್ತೇನೆ).

http://www.sunnah.global/hadeeth/kn/show/5329